Interfaith Declaration on Climate Change

# ಹವಾಮಾನ ಬದಲಾವಣೆಯ ಬಗ್ಗೆ ಅಂತರಧರ್ಮಗಳ ಘೋಷಣೆ

ಸೃಷ್ಟಿಯನ್ನು ಲಕ್ಷಿಸಿ, ಗೌರವಿಸುವುದು ಎಲ್ಲ ಧರ್ಮಗಳ ಮತ್ತು ಮತಗಳ ಕೇಂದ್ರ ವಿಚಾರ. ಆದರೆ ಇಂದು ನಮ್ಮಿಂದ ತಯಾರಾಗುವ ಹಸಿರುಮನೆ (ಸಸ್ಯಾಗಾರ) ಅನಿಲಗಳಿಂದ ಮನುಕುಲವು ಭೂಮಿಯ ಮೇಲಿನ ಜೀವರಾಶಿಗೆ ಅಪಾಯವನ್ನು ತಂದೊಡ್ಡಿದೆ. ಈ ಅನಿಲಗಳು ಭೂಮಂಡಲದ ಹವಾಮಾನ ವ್ಯವಸ್ಥೆಯನ್ನು ಬುಡಮೇಲು ಮಾಡಿ, ಭೂಮಿಯ ಉಷ್ಣತೆಯನ್ನು ಹೆಚ್ಚಿಸಿ, ಸಾಗರಗಳನ್ನು ಹೆಚ್ಚು ಆಮ್ಲೀಕರಿಸಿ, ಮನುಕುಲ ಮತ್ತು ಸಕಲ ಜೀವರಾಶಿಯನ್ನು ತೀವ್ರ ಗಂಡಾಂತರಕ್ಕೆ ಒಳಪಡಿಸಿದೆ.

ಪ್ರಕೃತಿಯ ನಾಜೂಕಾದ ಸಮತೆ ದಿನೇ ದಿನೇ ಸವೆಯುತ್ತಿದೆ. ಅದೇ ಸಮಯದಲ್ಲಿ, ಮನುಷ್ಯನ ಕ್ರಿಯೆಗಳು ಗಾಳಿ, ಭೂಮಿ, ಸಾಗರ ಮತ್ತು ಜೀವಗಳ ಸಂಕೀರ್ಣ ಜಾಲದಲ್ಲಿ ವಿಶಾಲವಾದ, ಅಧಿಕ ಅಪಾಯಕಾರಿ ಮತ್ತು ಬಹುಶಃ ಹಿಮ್ಮರಳಿಸಲಾಗದ ಬದಲಾವಣೆಗಳನ್ನು ಉಂಟುಮಾಡುತ್ತಿವೆ.

ಇಂದು, ಭೂಮಿಯ ಹಿತ ಮತ್ತು ಬಡವರ ಹಾಗೂ ನೋಯಾಳಿಗಳ ರಕ್ಷಣೆಗೆ ಕೊಟ್ಟ ನಮ್ಮ ಕರೆಯಲ್ಲಿ ನಾವೆಲ್ಲ ಒಟ್ಟಿಗಿದ್ದೇವೆ. ನಮ್ಮ ಧರ್ಮಗಳ ತತ್ವಗಳು ಹಾಗೂ ಸಂಪ್ರದಾಯಗಳು ಹವಾಮಾನ ಬದಲಾವಣೆ ಮತ್ತು ವಿವೇಚನೆಯುಳ್ಳ, ಅನುಕಂಪದ ನಾಯಕತ್ವದ ಬಲವಾದ ಕಾರ್ಯಾಚರಣೆಗೆ ಕರೆ ಕೊಡುತ್ತವೆ.

ಹವಾಮಾನ ಬದಲಾವಣೆಯ ವಿಜ್ಞಾನವನ್ನು ನಾವು ಗುರುತಿಸುತ್ತೇವೆ. ಹವಾಮಾನ ಬಿಕ್ಕಟ್ಟಿನ ಕಷ್ಟತಮ ಅಪಾಯಗಳನ್ನು ತಡೆಯಲು, ಹಸಿರುಮನೆ ಅನಿಲಗಳನ್ನು ಮಿತವಾಗಿಸುವ ಮೂಲಕ ಬಲವಾದ, ಬಿಗಿಯಾದ, ವಿಜ್ಞಾನಾಧಾರಿತ ಗುರಿಗಳನ್ನು ಅಂಗೀಕರಿಸಲು ನಮ್ಮ ನಾಯಕರನ್ನು ಆಹ್ವಾನಿಸುತ್ತೇವೆ. ತೀವ್ರ ಬಿರುಗಾಳಿ, ನೆರೆ ಹಾವಳಿ, ಕ್ಷಾಮ ಮತ್ತು ಸಮುದ್ರದುಬ್ಬರ ಮುಂತಾದ ಬದಲಾವಣೆಗಳಿಂದ ಬಾಧಿತರಾದ ಜನರಿಗೆ ನೆರವು ನೀಡುವುದನ್ನು ಖಚಿತ ಪಡಿಸಬೇಕೆಂದು ಎಲ್ಲ ರಾಷ್ಟ್ರಗಳಿಗೂ ನಾವು ಆಗ್ರಹಿಸುತ್ತೇವೆ. ಅವರು ಹೊಂದಿಕೊಳ್ಳಲು, ಬದುಕಲು ಮತ್ತು ಏಳಿಗೆಯಾಗಲು ನೆರವಾಗಬೇಕೆಂದು ಕೋರುತ್ತೇವೆ.

ಹವಾಮಾನ ವ್ಯತ್ಯಾಸವು ಕೇವಲ ಒಂದು ಆರ್ಥಿಕ ಅಥವ ತಾಂತ್ರಿಕ ಸಮಸ್ಯೆಯಲ್ಲವೆಂಬುದನ್ನು ನಾವು ಗುರುತಿಸುತ್ತೇವೆ. ಅಂತರಾಳದಲ್ಲಿ ಅದೊಂದು ನೈತಿಕ, ಅಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಮಸ್ಯೆ. ಆದುದರಿಂದ ಹವಾಮಾನ ಬದಲಾವಣೆ ಬಗ್ಗೆ ಇತರರಿಗೆ ತಿಳಿಸಿ, ಮಾರ್ಗದರ್ಶನ ಮಾಡಿ, ಅವರು ವಿವಿಧ ಆಯ್ಕೆಗಳನ್ನು ಮಾಡಲು ನಾವು ಒಟ್ಟುಗೂಡಿ ಭರವಸೆ ನೀಡುತ್ತೇವೆ. ನಾವು ಹಂಚಿಕೊಂಡಿರುವ ಗ್ರಹದ ಚೌಕಟ್ಟಿನಲ್ಲಿ ನಾವೆಲ್ಲ ಒಟ್ಟಿಗೆ ಬಾಳಲು ಕಲಿಯಬೇಕು.

ಹವಾಮಾನ ವ್ಯತ್ಯಾಸವು ನಮಗೆ ಭಾರಿ ಸವಾಲುಗಳನ್ನೂ ಮತ್ತು ಅವಕಾಶಗಳನ್ನೂ ಒದಗಿಸಿದೆ ಎಂಬುದನ್ನು ನಾವು ಅರಿತಿದ್ದೇವೆ. ಹವಾಮಾನ ವ್ಯತ್ಯಾಸದ ಅಪಾಯವನ್ನು ಮಿತಗೊಳಿಸುವುದರಿಂದ ನಮ್ಮ ಆರ್ಥಿಕ ವ್ಯವಸ್ಥೆ ಸಬಲಗೊಂಡು, ನಮ್ಮ ಗ್ರಹವು ರಕ್ಷಿಸಲ್ಪಡುವುದಲ್ಲದೆ ಬಡವರಿಗೆ ಸಹಾಯ ಮಾಡಿ, ನಮ್ಮನ್ನು ಒಂದು ಸಾಮಾನ್ಯ ಧ್ಯೇಯದತ್ತ ಒಂದುಗೂಡಿಸುತ್ತದೆ. ಜನರು ಮತ್ತು ಜೀವಿಗಳು ಬದುಕಲು ಮತ್ತು ಹವಾಮಾನ ಬದಲಾವಣೆಗೆ ಹೊಂದಿಕೊಳ್ಳಲು ಸಹಾಯ ಮಾಡುವ ಮೂಲಕ ನಾವು ಬುದ್ಧಿವಂತಿಕೆ, ಅನುಕಂಪ ಮತ್ತು ಶ್ರೇಷ್ಠ ಮಟ್ಟದ ನೈತಿಕ ಮೌಲ್ಯಗಳನ್ನು ಆಚರಿಸುತ್ತೇವೆ.

ನಮ್ಮ ಅಭ್ಯಾಸಗಳನ್ನು ಬದಲಾಯಿಸಲು, ನಮ್ಮ ಆಯ್ಕೆಗಳು, ಮತ್ತು ನಾವು ಪ್ರಪಂಚವನ್ನು ನೋಡುವ ರೀತಿ – ನಮ್ಮ ಪರಿವಾರಗಳಿಗೆ, ಸ್ನೇಹಿತರಿಗೆ ಮತ್ತು ಧರ್ಮಗಳಿಗೆ ಕಲಿಸಲು – ನಮ್ಮ ಭೂಮಿಯ ಮತ್ತು ಮನೆಗಳ ಸಂಕುಚಿತ ಸಂಪನ್ಮೂಲಗಳನ್ನು ಉಳಿಸಲು ಮತ್ತು ಜೀವವು ಅವಲಂಬಿಸುವ ಹವಾಮಾನ ಪರಿಸ್ಥಿತಿಗಳನ್ನು ರಕ್ಷಿಸಲು ನಾವು ಇಂದು ಮತ್ತು ಪ್ರತಿ ದಿನವೂ ಕಾರ್ಯಾಚರಣೆಗೆ ಬದ್ಧರಾಗಿದ್ದೇವೆ.

ಇಂತಹ ಸಂದರ್ಭದಲ್ಲಿ, ನಾವು ಎದುರಿಸುತ್ತಿರುವ ಅಪಾಯದ ನಿಜಸ್ಥಿತಿಯನ್ನು ಗುರುತಿಸಿ, ಪ್ರಬಲ ತುರ್ತು ಕಾರ್ಯಾಚರಣೆಗೆ ಮತ್ತು ಬದಲಾಗಲು ದೊರೆತಿರುವ ಅವಕಾಶವನ್ನು ಅಂಗೀಕರಿಸುವಂತೆ ನಾವು ನಮ್ಮ ಧರ್ಮದವರನ್ನು, ಪ್ರಪಂಚದ ಎಲ್ಲ ಜನರನ್ನು ಮತ್ತು ನಮ್ಮ ನಾಯಕರನ್ನು ಆಹ್ವಾನಿಸುತ್ತೇವೆ.